**ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ, ನ್ಯಾಯಾಲಯ, ಗುಂಡ್ಲುಪೇಟೆ**

**ಸಿ.ಸಿ ಸಂಖ್ಯೆ: 481/2025**

| | | | |
|---|---|---|---|
| ಹೆಸರು | | ಶ್ರೀ ರಾಮಕೃಷ್ಣಯ್ಯ | ಚಾಸಾಃ 03 |
| ತಂದೆ ಹೆಸರು | | ಶ್ರೀ ರಂಗಯ್ಯ | ಫ್ರಾಸಾಃ 03 |
| ವಯಸ್ಸು | | 69 ವರ್ಷ | ಸಾಕ್ಷಿಯನ್ನು ದಿನಾಂಕಃ 19.12.2025 ರಂದು ಪ್ರಮಾಣೀಕರಿಸಲಾಯಿತು. |
| ಉದ್ಯೋಗ | | ವ್ಯವಸಾಯ | |
| ವಾಸ | | ಕೋಟೆಕೆರೆ ಗ್ರಾಮ | |

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ–**

ದಿಃ 19.03.2025 ರಂದು ಆರೋಪಿಗಳು ಸೊಸೈಟಿ ಕಟ್ಟಡ ತಮ್ಮದು ಎಂದು ಒಳಭಾಗದಲ್ಲಿ ಕುಳಿತಿದ್ದರು. ನಂತರ ಪೊಲೀಸರು ಬಂದು ಖಾಲಿ ಮಾಡಿಸಿದರು. ನಾನು ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ. ಸಾಕ್ಷಿಯು 1ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಉಳಿದ ಆರೋಪಿಗಳು ಗೈರು ಹಾಜರಿದ್ದು, ಗುರುತಿಸುವಿಕೆ ಬಗ್ಗೆ ತಕರಾರು ಇಲ್ಲ ಎಂದು ಆರೋಪಿ ಪರ ವಕೀಲರು ನುಡಿಯುತ್ತಾರೆ. ಸಾಕ್ಷಿಯು ಮು.ಮಾ.1 ನ್ನು ನೋಡಿ ಗುರುತಿಸಿರುತ್ತಾರೆ. ಚಾಸಾ–1 ರವರು ದೂರು ನೀಡಿರುತ್ತಾರೆ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಎಪಿಪಿರವರು ಅನುಮತಿ ಕೋರಿರುತ್ತಾರೆ. ದಾಖಲೆಗಳನ್ನು ಪರಿಶೀಲಿಸಿ ಅನುಮತಿಸಿದೆ.)

**ಪಾಟೀ ಸವಾಲು: ಮಾನ್ಯ ಎಪಿಪಿ ಯವರಿಂದಃ**

ದಿಃ 12.12.2025 ರಂದು ಕೋಟೆಕೆರೆ ಗ್ರಾಮದ ಜಂಜರ್ ನಂ.96 ಆಸ್ತಿ ಸಂಖ್ಯೆ 80ಬಿ 18x20 ಅಡಿ ಜಾಗವನ್ನು ಚಾಸಾ–1 ರವರು ಸೊಸೈಟಿಗಾಗಿ ಖರೀದಿ ಮಾಡಿದ್ದರು ಎಂದರೆ ಸರಿ.

ಸದರಿ ಜಾಗದಲ್ಲಿ ಸೊಸೈಟಿಯನ್ನು ಕಟ್ಟಿ ದಿಃ 26.01.2002 ರಲ್ಲಿ ಉದ್ಘಾಟನೆ ಮಾಡಲಾಗಿತ್ತು ಎಂದರೆ ಸರಿ. ದಿಃ 19.03.2025 ರಂದು ಮಧ್ಯಾಹ್ನ 3.00 ಗಂಟೆಗೆ ಆರೋಪಿತರು ಸದರಿ ಸೊಸೈಟಿಯ ಬೀಗ ಹೊಡೆದು ಅಕ್ರಮ ಪ್ರವೇಶ ಮಾಡಿದರು ಎಂದರೆ ಸರಿ. ಸದರಿ ವಿಷಯವನ್ನು ಗ್ರಾಮಸ್ಥರು ತಿಳುವಳಿಕೆ ನೀಡಿದರು ಒಪ್ಪದೆ ಕಛೇರಿಯನ್ನು ಖಾಲಿ ಮಾಡಿರಲಿಲ್ಲ ಎಂದರೆ ಸರಿ.

**ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ, ಸಮಯ ನೀಡಿ ಪಾಟೀ ಸವಾಲಿಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಉಕ್ತ ಲೇಖನ ಕೊಟ್ಟು ಓದಿ ನೋಡಿ ಸರಿಪಡಿಸಿ ನಂತರ  ಸಹಿ ಮಾಡಲಾಯಿತು)

**ಓ ಹೇ ಕೇ ಸ ಇ ಎ ಒ**

**(ಗಿರೀಶ ಆರ್.ಬಿ)**
**ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ**
**ಗುಂಡ್ಲುಪೇಟೆ**